ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ:ಪಪೂಶಿ/ಲೆಪ-03/ಇತರೆ/2014-15 ದಿನಾಂಕ: 25-02-2015.

ಅತಿ ಜರೂರು

ಗೆ,

ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ,

------------------

ಮಾನ್ಯರೆ,

ವಿಷಯ:-2014-15ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಈವರೆಗೆ ಬಿಡುಗಡೆಯಾದ ಅನುದಾನವನ್ನು ದಿನಾಂಕ 28-02-2015ರೊಳಗೆ ಪೂರ್ಣ ವೆಚ್ಚ ಭರಿಸುವ ಕುರಿತು.

2014-15ನೇ ಸಾಲಿಗೆ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಈವರೆಗೆ, ವಿಶೇಷ ಜಾಗೃತದಳದ ಸದಸ್ಯರ ಸಂಭಾವನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳಿಗೆ ಅಗತ್ಯವಿರುವ ಅನುದಾನ, 2014 ಮಾರ್ಚ್/ಜುಲೈ ಪ್ರಾಯೋಗಿಕ/ತತ್ವಭಾಗದ ಪರೀಕ್ಷಾ ಕೇಂದ್ರ ಸಾದಿಲ್ವಾರು, ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿ ವೇತನ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ/ಅನಿಪುಣ ಅಂಶಕಾಲಿಕ ನೌಕರರ ಸಂಭಾವನೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಬಿಡುಗಡೆಗೊಳಿಸಲಾದ ಅನುದಾನ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾದ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರುಪಾವತಿಸಲು ಬಿಡುಗಡೆಗೊಳಿಸಲಾದ ಅನುದಾನ -ಈ ಮೊತ್ತಗಳನ್ನು ನಿರ್ದೇಶನಾಲಯದಿಂದ ಬಿಡುಗಡೆಗೊಳಿಸಿ ತಿಂಗಳುಗಳು ಮೀರಿದ್ದರೂ ಈವರೆವಿಗೆ ನಿಗಧಿತ ಉದ್ದೇಶಕ್ಕೆ/ಪಾವತಿಗೆ ಕ್ರಮವಹಿಸಿ ಹಣ ಸೆಳೆಯದೇ ಇರುವುದು ಮಾನ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರ ಗಮನಕ್ಕೆ ಬಂದಿರುತ್ತದೆ. ಹಾಗೂ ಇದನ್ನು ತೀಕ್ಷ್ಣವಾಗಿ ಪರಿಗಣಿಸಲಾಗಿದ್ದು ಸದರಿ ಮೊತ್ತಗಳನ್ನು ಖಜಾನೆಗಳಿಂದ ಹಿಂಪಡೆಯಲಾಗಿರುವುದು ಕಂಡುಬಂದಿರುತ್ತದೆ.

ಇದಕ್ಕೆ ಸಂಬಂಧಿಸಿದಂತೆ, ನಿರ್ದೇಶನಾಲಯದಿಂದ ಆರ್ಥಿಕ ಇಲಾಖೆಗೆ ಪತ್ರ ಬರೆಯಲಾಗಿದ್ದು, ಹಿಂಪಡೆಯಲಾದ ಮೊತ್ತವನ್ನು ಶೀಘ್ರವಾಗಿ ಆಯಾ ಡಿಡಿಓ ಕೋಡ್‌ಗಳಿಗೆ ಮರುಹೊಂದಿಸಬೇಕಾಗಿ ಕೋರಲಾಗಿರುತ್ತದೆ. ಸದರಿ

Flash

ಅಂಶಗಳನ್ನು ಪರಿಗಣಿಸಿ ಆಯಾ ಅನುದಾನದ ಮೊತ್ತಗಳನ್ನು ಮರುಹೊಂದಿಸಬಹುದೆಂದು ನಿರೀಕ್ಷಿಸಲಾಗಿದೆ. ಆದ್ದರಿಂದ ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಪಾವತಿಗೆ ಬಾಕಿಯಿರುವ ಬಿಲ್ಲುಗಳನ್ನು ತುರ್ತಾಗಿ ಖಜಾನೆಗೆ ಸಲ್ಲಿಸಿ ದಿನಾಂಕ: 28-02-2015ರೊಳಗಾಗಿ ಹಣ ಸೆಳೆಯುವಂತೆ ಸೂಚಿಸಿದೆ. ವಿಳಂಬನೀತಿ ಅನುಸರಿಸಿದಲ್ಲಿ ಮುಂಬರುವ ಎಲ್ಲಾ ರೀತಿಯ ಹಣಕಾಸಿನ ಹಾಗೂ ಪರೀಕ್ಷಾ ವ್ಯತ್ಯಯಗಳಿಗೆ ಜಿಲ್ಲಾ ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ~~ಸಲಾ~~ ಮಾಡಲಾಗುವುದು.

Sd/-

ನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ.